2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

**ಸತ್ರ ಪ್ರಕರಣ ಸಂಖ್ಯೆ: 99/2013**

ಫಿರ್ಯಾದಿ. ರಾಜ್ಯದ ಪರವಾಗಿ ಬಸವನಹಳ್ಳಿ ಪೊಲೀಸರು.

ವಿರುದ್ಧ

ಆರೋಪಿತರು 2. ಶಾಬಾಜ್

ದಂ.ಪ್ರ.ಸಂ. ಕಲಂ 313ರ ಅಡಿಯಲ್ಲಿ ದಾಖಲಿಸಲಾದ ಆರೋಪಿತರ ಹೇಳಿಕೆ

ಪ್ರಶ್ನೆ:1:ನ್ಯಾಯಾಲಯದಲ್ಲಿ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀಯಾ?

ಉತ್ತರ:

ಪ್ರಶ್ನೆ-2: ಪ್ರಾಸಾ-1ಅಬ್ದುಲ್ ವಾಜಿದ್ ತಮ್ಮ ಸಾಕ್ಷ್ಯದಲ್ಲಿ ದಿ:08.03.013 ರಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ 1ನೇ ಆರೋಪಿಯಾದ ನೀವು ಮತ್ತು ನಿಮ್ಮ ಕಡೆಯವರು ನಯಾಜ್‌ಗೆ ಹೊಡೆದಿದ್ದರೆಂದು, ನಯಾಜ್‌ನನ್ನು ಅವರು ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-3 ಪ್ರಾಸಾ-1 ಮತ್ತು ಪ್ರಾ-ಸಾ-4 ಅಸ್ಲಂರವರು ರವರು ಮುಂದುವರಿದು ಅವರು ಮನೆಯಿಂದ ಸಹರಾ ಶಾದಿ ಮಹಲ್ ಬಳಿ ದಿಃ-8-3-13ರಂದು ಸಂಜೆ 7 ಗಂಟೆ ಸಮಯದಲ್ಲಿ ಬರುತ್ತಿದ್ದಾಗ, ಅವರ ಮಕ್ಕಳು ಅದೇ ಸಮಯದಲ್ಲಿ ಗ್ಯಾರೇಜ್‌ನಿಂದ ಕೆಲಸ ಮುಗಿಸಿಕೊಂಡು ಬಂದಿದ್ದು ಅವರು ಮತ್ತು ಅವರ ಮಕ್ಕಳು ಮಾತನಾಡುತ್ತಾ ನಿಂತಿದ್ದಾಗ, ಆರೋಪಿಗಳಾದ ನೀವುಗಳೆಲ್ಲರೂ ಓಡಿ ಬಂದು ಇವರು ನಯಾಜ್ ಅಲಿಯಾಸ್ ನಾಜೂ ಕಡೆಯವರು ಇವರನ್ನು ಉಳಿಸಬಾರದು ಕಡಿಯಿರಿ ಎಂದು ಕೂಗಾಡಿದಿರೆಂದು ನುಡಿದಿದ್ದಾರೆ. ಇದರ ಬಗ್ಗೆ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-4 ಪ್ರಾಸಾ-1 ಮತ್ತು 6ರವರು ಮುಂದುವರಿದು ಅವರ ಮಗ ಇಕ್ರಂಗೆ ಆರೋಪಿ ಚಾಂದ್ ನೀನು ಕತ್ತಿಯಿಂದ ತಲೆಗೆ, ಬೆನ್ನಿಗೆ ಹೊಡೆದಿದ್ದು, ಇಮ್ರಾನ್‌ಗೆ 2ನೇ ಆರೋಪಿ ಶಹಬಾಸ್ ನೀನು ತಲ್ವಾರ್‌ನಿಂದ ಕೈಗೆ ಮತ್ತು ಭುಜಕ್ಕೆ ಹೊಡೆದಿದ್ದು, ಅಸ್ಲಾಂಗೆ 1ನೇ ಆರೋಪಿ ಜೋಹಾರ್ ಕೈಗೆ, ಕುತ್ತಿಗೆಗೆ ತಲ್ವಾರ್‌ನಿಂದ ಹೊಡೆದಿದ್ದು , 6ನೇ ಆರೋಪಿಯಾದ ನೀನು ದೊಣ್ಣೆಯಿಂದ ಅಸ್ಲಾಂರವರ ತಲೆಗೆ, ಕೈಗೆ, ಕುತ್ತಿಗೆಗೆ ಹೊಡೆದು, 5 ಮತ್ತು 7ನೇ ಆರೋಪಿಗಳಾದ ನೀವು ಅಕ್ರಂರವರಿಗೆ ತಲ್ವಾರ್‌ನಿಂದ ಕೈಗೆ, ಕಾಲಿಗೆ, ಮೂಗಿಗೆ ಮತ್ತು ಮೈಗೆ ಹೊಡೆದಿರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-5 ಪ್ರಾಸಾ-1 ಮತ್ತು 6ರವರು ಮುಂದುವರಿದು ರಫೀಕ್‌ರವರಿಗೆ 3ನೇ ಆರೋಪಿಯಾದ ನೀನು ದೊಣ್ಣೆಯಿಂದ ಮುಖಕ್ಕೆ, ಬೆನ್ನಿಗೆ ಮತ್ತು ಬುರುಡೆಗೆ ಹೊಡೆದಿರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-6 ಪ್ರಾಸಾ-1 ಮತ್ತು 6ರವರು ಮುಂದುವರಿದು ಅವರು ಮತ್ತು ಇತರೆಯವರು ಬಂದಿದ್ದನ್ನು ನೋಡಿ ಬಿಟ್ಟು ಓಡಿ ಹೋದಿರೆಂದು, ಗಾಯಗೊಂಡವರನ್ನು ಅವರು ಆಸ್ಪತ್ರೆಗೆ ದಾಖಲು ಮಾಡಿ, ಆ ಬಗ್ಗೆ ನಿಪಿ-1 ದೂರನ್ನು ಪ್ರಾಸಾ-

1ರವರು ಪೊಲೀಸರಿಗೆ ಕೊಟ್ಟಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-7 ಪ್ರಾಸಾ-1ರವರು ಮುಂದುವರಿದು ಇಕ್ರಂನನ್ನು ಬಿಟ್ಟು ಉಳಿದವರಿಗೆ ಇಲ್ಲಿ ಚಿಕಿತ್ಸೆ ಕೊಡಲು ಆಗುವುದಿಲ್ಲ ಎಂದಿದ್ದು ಉಳಿದವರನ್ನು ಮಂಗಳೂರಿನ ಐಲ್ಯಾಂಡ್ ಆಸ್ಪತ್ರೆಗೆ ಸೇರಿಸಿರುತ್ತಾರೆಂದು, ಆರೋಪಿಗಳಾದ ನೀವು ಅವರ ಅಣ್ಣನ ಮಗನಿಗೆ ಹೊಡೆದಿದ್ದು ಆತನನ್ನು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿದ್ದರಿಂದ ಜಿದ್ದು ಇಟ್ಟುಕೊಂಡು ಆರೋಪಿಗಳಾದ ನೀವು ಅವರ ಮಕ್ಕಳಿಗೆ ಹಲ್ಲೆ ಮಾಡಿರುತ್ತಾರೆಂದು, ನ್ಯಾಯಾಲಯದಲ್ಲಿರುವ ನಾಲ್ಕು ಮಚ್ಚುಗಳನ್ನು, ಎರಡು ದೊಣ್ಣೆಗಳನ್ನು ಮತ್ತು ಒಂದು ಕಬ್ಬಿಣದ ರಾಡ್‌ನ್ನು ಸಾಕ್ಷಿ ನೋಡಿ ಗುರುತಿಸಿ ಸಾಕ್ಷ್ಯ ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-8 ಪ್ರಾಸಾ-2 ನಯಾಜ್‌ರವರು ತಮ್ಮ ಸಾಕ್ಷ್ಯದಲ್ಲಿ ಮೂರು ವರ್ಷಗಳ ಹಿಂದೆ ಮುನ್ಸಿಪಲ್ ಚುನಾವಣೆಗೆ 1ನೇ ಆರೋಪಿಯಾದ ನಿಮ್ಮ ಹೆಂಡತಿ ಜೆಡಿಎಸ್ ಪಕ್ಷದಿಂದ ನಿಂತಿದ್ದು, ಅವರು 1ನೇ ಆರೋಪಿಯಾದ ನಿಮ್ಮ ಹೆಂಡತಿ ಹಣ ಪಡೆದು ಉಮೇದುವಾರಿಕೆಯನ್ನು ವಾಪಸ್ಸು ಪಡೆದುಕೊಂಡಿದ್ದಾರೆಂದು ಹೇಳುತ್ತಿದ್ದೇನೆಂದು 3 ವರ್ಷಗಳ ಹಿಂದೆ ಶುಕ್ರವಾರ ಮಧ್ಯಾಹ್ನ 3.00–3:30 ಸಮಯದಲ್ಲಿ ಅವರ ಕುತ್ತಿಗೆಗೆ, ಬೆನ್ನಿಗೆ ಮತ್ತು ಎದೆಗೆ ಪರಚಿದಿರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-9 ಪ್ರಾಸಾ-3 ಇಕ್ರಂ, ಪ್ರಾಸಾ-5 ಇಮ್ರಾನ್ ತಮ್ಮ ಸಾಕ್ಷ್ಯದಲ್ಲಿ ಅವರು ಸಾಕ್ಷ್ಯ ನುಡಿದಾ ಮೂರು ವರ್ಷಗಳ ಹಿಂದೆ 8ನೇ ತಾರೀಖು ಸಂಜೆ 7 ಗಂಟೆ ಸಮಯದಲ್ಲಿ ಅವರು ಗ್ಯಾರೇಜ್‌ನಿಂದ ಬರುತ್ತಿದ್ದಾಗ; ಸಹರಾ ಶಾದಿ ಮಹಲ್ ಹತ್ತಿರ ಆಟೋ ಸರ್ಕಲ್ ಬಳಿ ನಿಂತಿದ್ದ ಅವರು ತಮ್ಮಂದಿರೊಂದಿಗೆ ನಿಂತಿದ್ದಾಗ ಆರೋಪಿಗಳಾದ ನೀವು ನಯಾಜ್‌ರವರಿಗೆ ರಾಡ್, ದೊಣ್ಣೆ

ಕತ್ತಿಗಳನ್ನು ಹಿಡಿದು ಸೂಳೆಮಕ್ಕಳು ನಿಂತಿದ್ದಾರೆ ಹೊಡೆಯಿರೋ ಕೊಚ್ಚಿಹಾಕಿ ಅಂತ ಹೇಳಿದಿರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-10 ಪ್ರಾಸಾ-3 ಇಕ್ರಂ ಮತ್ತು 5ರವರು ಮುಂದುವರಿದು ಪ್ರಾಸಾ-3ರವರಿಗೆ 7ನೇ ಆರೋಪಿ ನದೀಮ್ ಅಜುಂ ನೀನು ಕತ್ತಿಯಿಂದ ತಲೆಯ ಮೇಲೆ ಮತ್ತು ಕಿವಿಯ ಹಿಂಭಾಗದಲ್ಲಿ ಹೊಡೆದಿರೆಂದು, ಅವರ ತಮ್ಮ ಅಸ್ಲಂಗೆ ಜೋಹಾರ್ ಕತ್ತಿಯಿಂದ ಎರಡೂ ಕೈಗಳಿಗೆ, ಕುತ್ತಿಗೆಗೆ ಕತ್ತರಿಸಿದ್ದು ಇಮ್ರಾನ್‌ರವರಿಗೆ ಶಹಬಾಜ್‌ರವರು ಕತ್ತಿಯಿಂದ ಹೊಡೆದು, ಅಕ್ರಂನ ಮುಖಕ್ಕೆ, ಕಾಲಿಗೆ, ಬೆನ್ನಿಗೆ ಕತ್ತಿಯಿಂದ ಹೊಡೆದಿರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-11 ಪ್ರಾಸಾ-3 ಮತ್ತು 5ರವರು ಮುಂದುವರಿದು 4ನೇ ಆರೋಪಿ ಚಾಂದ್ ರಫೀಕ್‌ರವರಿಗೆ ದೊಣ್ಣೆಯಿಂದ ಹೊಡೆದಿರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-12 ಪ್ರಾಸಾ-3ರವರು ಮುಂದುವರಿದು ಶಾಮಹಲ್ ಹತ್ತಿರ ಆಟೋ ಸರ್ಕಲ್‌ನಲ್ಲಿ ಘಟನೆ ನಡೆದಿದ್ದು ಮಹಜರ್ ಸಮಯದಲ್ಲಿ ರಕ್ತವಿಲ್ಲದ 2 ಕಲ್ಲುಗಳನ್ನು ಹಾಗೂ ರಕ್ತವಾಗಿದ 2 ಕಲ್ಲುಗಳನ್ನು ಮು.ಮಾ-9 ಮತ್ತು 10 ಎಂದು ಗುರ್ತಿಸಿ ಸಾಕ್ಷ್ಯ ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-13 ಪ್ರಾಸಾ-5ರವರು ಮುಂದುವರಿದು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಕರೆ ಕರೆದುಕೊಂಡು ಹೋಗಿದ್ದು, ಅವರು ಧರಿಸಿದ್ದ ಬಟ್ಟೆಗೆ ರಕ್ತವಾಗಿತ್ತೆಂದು, ಮಾರನೇ ದಿನ ಪೊಲೀಸರಿಗೆ ದೂರು ನಿಪಿ-9ನ್ನು ಕೊಟ್ಟಿರುತ್ತಾರೆಂದು ಸಾಕ್ಷ್ಯ ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-14 ಪ್ರಾಸಾ-5ರವರು ಮುಂದುವರಿದು ಅವರ ಎಡಗೈನ ಬೆರಳುಗಳು ಚಲನೆ ಇರುವುದಿಲ್ಲವೆಂದು ಹಾಗೂ ಅವರು ಆ ದಿನ ಹಾಜರುಪಡಿಸಿದ ರಕ್ತಸಿಕ್ತದ ಜೀನ್ಸ್ ಪ್ಯಾಂಟ್‌ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.12 ಎಂದು ಗುರುತಿಸಿ, ಅವರಿಗೆ ಹೊಡೆಯಲು ಉಪಯೋಗಿಸಿದ ಕತ್ತಿಗಳನ್ನು, ರಾಡ್‌ನ್ನು, ದೊಣ್ಣೆಗಳನ್ನು ಮು.ಮಾ.1 ರಿಂದ 7 ಎಂದು ಗುರ್ತಿಸಿ ಸಾಕ್ಷ್ಯ ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-15 ಪ್ರಾಸಾ-6 ರಫೀಕ್ ತಮ್ಮ ಸಾಕ್ಷ್ಯದಲ್ಲಿ ಅವರು ಸಾಕ್ಷ್ಯ ನುಡಿದಾ 3 ವರ್ಷಗಳ ಹಿಂದೆ ಸಂಜೆ 7 ಗಂಟೆಯ ಸಮಯದಲ್ಲಿ ಜೋಹಾರ್ ಹೆಂಡತಿ ಚುನಾವಣೆಗೆ ನಿಂತು ಹಣ ತೆಗೆದುಕೊಂಡ ಬಗ್ಗೆ ಉಮೇದುವಾರಿಕೆಯನ್ನು ವಾಪಾಸ್ಸು ತೆಗೆದುಕೊಂಡ ಸಂಬಂಧದ ಬಗ್ಗೆ ಮಾತನಾಡುತ್ತಿದ್ದಾಗ, ಆರೋಪಿಗಳಾದ ನೀವು ಸೂಳೇಮಕ್ಕಳು ಇಲ್ಲೇ ಇದ್ದಾರೆಂದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತೀರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-16 ಪ್ರಾಸಾ-6 ರಫೀಕ್ ಮತ್ತು ಪ್ರಾಸಾ-7 ಅಕ್ರಂರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಗಳಾದ ನೀವುಗಳು ಸಂಜೆ 3 ಗಂಟೆಗೆ ನಾಯಾಜ್‌ರವರಿಗೆ ಹೊಡೆದಿದ್ದ ಬಗ್ಗೆ ಮೂರು ವರ್ಷಗಳ ಹಿಂದೆ ಸಂಜೆ 7ರ ಸಮಯದಲ್ಲಿ ಅವರು, ಇಕ್ರಂ, ಅಸ್ಲಂ, ಇಮ್ರಾನ್ ಮತ್ತು ಕಾಲೂರವರು ಸಹರಾ ಶಾದಿ ಮಹಲ್ ಹತ್ತಿರ ಮಾತನಾಡುತ್ತಿದ್ದರೆಂದು, ನೀವುಗಳು ಸೂಳೇಮಕ್ಕಳೆ ನಯಾಜ್ ಕುಟುಂಬದವರು ಇಲ್ಲೇ ಇದ್ದಾರೆ ಅವರನ್ನು ಕೊಚ್ಚಿ ಸಾಯಿಸಿ ಎಂದು ಕೂಗಾಡುತ್ತಿದ್ದೀರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-17 ಪ್ರಾಸಾ-6 ಮತ್ತು 7ರವರು ಮುಂದುವರಿದು 1ನೇ ಆರೋಪಿಯಾದ ನೀನು ಅಸ್ಲಂರವರ 2 ಕೈಗಳನ್ನು ಕತ್ತಿಯಿಂದ ಕಡಿದು, ಆರೋಪಿಯಾದ ಚಾಂದ್

ನೀನು ಅವರಿಗೆ ರಾಡ್‌ನಿಂದ ತಲೆಗೆ ಮತ್ತು ಭುಜಕ್ಕೆ ಹೊಡೆದೆ, ನೌಶಿರ್ ಕತ್ತಿಯಿಂದ ಅವರ ಕಿವಿಗೆ ಮತ್ತು ಬೆನ್ನಿಗೆ ಹೊಡೆದು, ಕಾಲೂರವರ ಅಬೀದ್‌ರವರು ದೊಣ್ಣೆಯಿಂದ ಕಾಲಿಗೆ ಹೊಡೆದಿರುತ್ತೀರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-18 ಪ್ರಾಸಾ-6 ಮತ್ತು 7ರವರು ಮುಂದುವರಿದು ಅವರನ್ನು ದೊಡ್ಡ ಆಸ್ಪತ್ರೆಗೆ ಸೇರಿಸಿ ನಂತರ ಐಲ್ಯಾಂಡ್ ಆಸ್ಪತ್ರೆಗೆ ಸೇರಿಸಿದ್ದು ಅಲ್ಲಿ ಪೋಲೀಸರು ಅವರ ರಕ್ತವಾಗಿದ ಬಟ್ಟೆಗಳನ್ನು ಮು.ಮಾ-13ನ್ನು ತೆಗೆದುಕೊಂಡರೆಂದು ಹಾಗೂ ಆರೋಪಿಗಳಾದ ನೀವು ಕೃತ್ಯಕ್ಕೆ ಉಪಯೋಗಿಸಿದ ಮಾಲುಗಳನ್ನು ಮು.ಮಾ-1 ರಿಂದ 7 ಎಂದು ಗುರ್ತಿಸಿ ಸಾಕ್ಷ್ಯ ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:19 ಪ್ರಾಸಾ-8 ಜಾಫರ್‌ತಮ್ಮ ಸಾಕ್ಷ್ಯದಲ್ಲಿ 3 ವರ್ಷಗಳ ಹಿಂದೆ ಸಹರಾ ಸರ್ಕಲ್‌ನಲ್ಲಿರುವ ಅಣ್ಣಪ್ಪ ಕ್ಯಾಂಟೀನ್‌ನಲ್ಲಿ ಸುಮಾರು 6:45 ಗಂಟೆಯಲ್ಲಿ ಟೀ ಕುಡಿಯುತ್ತಿದ್ದಾಗ, ಆರೋಪಿಗಳಾದ ನೀವುಗಳೆಲ್ಲರೂ ಕತ್ತಿ ಮಚ್ಚು ತೆಗೆದುಕೊಂಡು ಬಂದು, ವಾಜಿದ್ ಮಕ್ಕಳಿಗೆ ಮತ್ತು ಅಕ್ರಂ, ರಫೀಕ್‌ರವರಿಗೆ ಶಹಬಾಜ್‌ರವರು ಇಮ್ರಾನ್‌ಗೆ ದೊಣ್ಣೆಯಿಂದ ಹೊಡೆದರು. ಜೋಹಾರ್‌ರವರು ಅಸ್ಲಂಗೆ ಕತ್ತಿಯಿಂದ ಹೊಡೆದರೆಂದು ಸಾಕ್ಷ್ಯ ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:20 ಪ್ರಾಸಾ-11 ಅಕ್ಬರ್ ತಮ್ಮ ಸಾಕ್ಷ್ಯದಲ್ಲಿ ರಾತ್ರಿ 6.30 ರಿಂದ 7.00ರ ಸಮಯದಲ್ಲಿ ಆರೋಪಿಗಳಾದ ನಿಮಗೂ ಮತ್ತು ವಾಜಿದ್‌ರವರ ಮಕ್ಕಳಿಗೂ ಗಲಾಟೆಯಾಗಿದ್ದು ನೀವುಗಳೆಲ್ಲರೂ ಅವರಿಗೆ ರಾಡು, ಕತ್ತಿ ಮತ್ತು ದೊಣ್ಣೆಗಳಿಂದ ಹೊಡೆದಿರುತ್ತೀರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:121 ಪ್ರಾಸಾ-14 ಫಜಲ್ ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಮಂಗಳೂರಿನ ಆಸ್ಪತ್ರೆಗೆ ಬಂದು ಅವರ ಸಮಕ್ಷಮ ಆಸ್ಪತ್ರೆಯಲ್ಲಿ ದಾಖಲಾಗಿದ್ದ 4 ಜನರ ರಕ್ತಸಿಕ್ತ ಬಟ್ಟೆಗಳನ್ನು ಮು.ಮಾ11 ರಿಂದ 14ರಂತೆ ತೆಗೆದುಕೊಂಡು ಮಹಜರು ಮಾಡಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:122 ಪ್ರಾಸಾ-15 ಸಲೀಂ ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಅವರನ್ನು ಠಾಣೆಗೆ ಕರೆಸಿ, ಆ ಸಮಯದಲ್ಲಿ ಆರೋಪಿ 2 ರಿಂದ 7 ರವರು ಠಾಣೆಯಲ್ಲಿದ್ದು, ಆರೋಪಿಗಳಾದ ನೀವು ಕೃತ್ಯಕ್ಕೆ ಉಪಯೋಗಿಸಿದ ಕತ್ತಿ, ರಾಡ್, ಮತ್ತು ದೊಣ್ಣೆಗಳನ್ನು ತೋರಿಸುವುದಾಗಿ ಮಲ್ಲಂದೂರು ರಸ್ತೆಯ ಉಪ್ಪಳ್ಳಿ, ದರ್ಗಾದ ಹತ್ತಿರ ಗಿಡಗಳಿದ್ದ ಜಾಗದಲ್ಲಿ ಬಚ್ಚಿಟ್ಟಿದ್ದ 3 ಕತ್ತಿಗಳು, 1 ರಾಡ್, 2 ದೊಣ್ಣೆಗಳನ್ನು ಹಾಜರುಪಡಿಸಿದ್ದು, 2 ಕತ್ತಿಗಳ ಮೇಲೆ ರಕ್ತಕಲೆಗಳಾಗಿದ್ದವೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:123 ಪ್ರಾಸಾ-16 ಎಂ.ವೈ.ರವಿಕುಮಾರ್ ತಮ್ಮ ಸಾಕ್ಷ್ಯದಲ್ಲಿ ದಿ:13-3-2012ರಂದು ಬಸವನಹಳ್ಳಿ ಠಾಣಾ ಪೋಲೀಸರ ಮನವಿ ಮೇರೆಗೆ ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟು ನಕ್ಷೆಯನ್ನು ತಯಾರಿಸಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:124 ಪ್ರಾಸಾ-17 ಡಾ. ಮೊಹಮದ್ ಸಾಲಿ ತಮ್ಮ ಸಾಕ್ಷ್ಯದಲ್ಲಿ ದಿ:8-3-2013 ಸಂಜೆ 7.15ರಂದು ಗಾಯಾಳು ಅಸ್ಲಂರವರನ್ನು ಪರೀಕ್ಷಿಸಿದಾಗ ನಿಪಿ-19 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಕತ್ತಿಯಿಂದ ಹೊಡೆದರೆ ಆಗುವಂಥ ಗಾಯಗಳಾಗಿದ್ದು, ಸದರಿ ಗಾಯಗಳು ಸಾಮಾನ್ಯ ಮತ್ತು ತೀವ್ರ ಸ್ವರೂಪದ ಗಾಯಗಳಾಗಿದ್ದವೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:25 ಪ್ರಾಸಾ-17 ಡಾ. ಮೊಹಮದ್ ಸಾಲಿ ತಮ್ಮ ಸಾಕ್ಷ್ಯದಲ್ಲಿ ದಿ:8-3-2013 ಗಾಯಾಳು ಇಮ್ರಾನ್‌ರವರನ್ನು ಪರೀಕ್ಷಿಸಿದಾಗ ನಿಪಿ-20 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಕತ್ತಿಯಿಂದ ಹೊಡೆದರೆ ಆಗುವಂಥ ಗಾಯಗಳಾಗಿದ್ದು ಸದರಿ ಗಾಯಗಳೆಲ್ಲ ತೀವ್ರ ಸ್ವರೂಪದ ಗಾಯಗಳಾಗಿದ್ದವೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:26 ಪ್ರಾಸಾ-17 ಡಾ. ಮೊಹಮದ್ ಸಾಲಿ ತಮ್ಮ ಸಾಕ್ಷ್ಯದಲ್ಲಿ ದಿ:8-3-2013 ಸಂಜೆ 7.40ಕ್ಕೆ ಗಾಯಾಳು ಅಕ್ರಂರವರನ್ನು ಪರೀಕ್ಷಿಸಿದಾಗ ನಿಪಿ-21 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ 6 ಗಾಯಗಳು ಕತ್ತಿಯಿಂದ ಮತ್ತು ದೊಣ್ಣೆಯಿಂದ ಹೊಡೆದರೆ ಆಗುವಂಥ ಗಾಯಗಳಾಗಿದ್ದು, ಸದರಿ ಗಾಯಗಳೆಲ್ಲ ತೀವ್ರ ಸ್ವರೂಪದ ಗಾಯಗಳಾಗಿದ್ದವೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-: 27 ಪ್ರಾಸಾ-17 ಡಾ. ಮೊಹಮದ್ ಸಾಲಿ ತಮ್ಮ ಸಾಕ್ಷ್ಯದಲ್ಲಿ ದಿ:8-3-2013 ಸಂಜೆ 7.50ಕ್ಕೆ ಗಾಯಾಳು ರಫೀಕ್‌ನನ್ನು ಪರೀಕ್ಷಿಸಿದಾಗ ನಿಪಿ-22 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ 4 ಗಾಯಗಳು ಕತ್ತಿಯಿಂದ ಮತ್ತು ದೊಣ್ಣೆಯಿಂದ ಹೊಡೆದರೆ ಆಗುವಂಥ ಗಾಯಗಳಾಗಿದ್ದು, ಸದರಿ ಗಾಯಗಳೆಲ್ಲ ತೀವ್ರ ಸ್ವರೂಪದ ಗಾಯಗಳಾಗಿದ್ದವೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:28 ಪ್ರಾಸಾ-17 ಡಾ. ಮೊಹಮದ್ ಸಾಲಿ ತಮ್ಮ ಸಾಕ್ಷ್ಯದಲ್ಲಿ ದಿ:8-3-2013 ಸಂಜೆ 6.15ಕ್ಕೆ ಗಾಯಾಳು ಅಕ್ರಂರವರನ್ನು ಪರೀಕ್ಷಿಸಿದಾಗ ನಿಪಿ-23 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ 2 ಗಾಯಗಳು ದೊಣ್ಣೆಯಿಂದ ಹೊಡೆದರೆ ಆಗುವಂಥ ಗಾಯಗಳಾಗಿದ್ದು, ಸದರಿ ಗಾಯಗಳೆಲ್ಲ ಸಾಮಾನ್ಯ

ಸ್ವರೂಪದ ಗಾಯಗಳಾಗಿದ್ದವೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:29 ಪ್ರಾಸಾ-17ರವರು ಮುಂದುವರಿದು ವೃತ್ತನಿರೀಕ್ಷಕರು ಕಳುಹಿಸಿಕೊಟ್ಟ ನ್ಯಾಯಾಲಯದ ಮುಂದಿರುವ ಕತ್ತಿ ರಾಡ್ ಮತ್ತು 2 ದೊಣ್ಣೆಗಳನ್ನು ನೋಡಿ ಗುರ್ತಿಸಿ, ಸದರಿ ಮು.ಮಾಗಳಿಂದ ಹೊಡೆದರೆ:ಕಡಿದರೆ ಅವರು ಗಾಯದ ಪ್ರಮಾಣ ಪತ್ರದಲ್ಲಿ ಹೇಳಿದ ಗಾಯಗಳಾಗುವ ಸಾಧ್ಯತೆ ಇದೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:30 ಪ್ರಾಸಾ-18 ಮಸೂರ್, ಆಟೋಚಾಲಕ, ತಮ್ಮ ಸಾಕ್ಷ್ಯದಲ್ಲಿ ದಿ:29.03.2013 ರಂದು 11 ಗಂಟೆಯ ಸಮಯದಲ್ಲಿ ಅವರು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ನ್ಯಾಯಾಲಯದ ಮುಂದಿರುವ 1ನೇ ಆರೋಪಿ ಜೋಹಾರ್ ನಿಮ್ಮನ್ನು ಪೊಲೀಸರು ದಸ್ತಗಿರಿ ಮಾಡಿದ್ದರೆಂದು, ನೀವು ಕೃತ್ಯಕ್ಕೆ ಉಪಯೋಗಿಸಿದ ಕತ್ತಿಯನ್ನು ಇಟ್ಟಿರುವ ಜಾಗವನ್ನು ತೋರಿಸುವುದಾಗಿ ಅವರನ್ನು, ಪೊಲೀಸರೊಂದಿಗೆ ಶಹರಾ ಶಾದಿ ಮಹಲ್ ಹತ್ತಿರ ಗಿಡಗಳಿದ್ದ ಜಾಗದಲ್ಲಿ ಕರೆದುಕೊಂಡು ಹೋಗಿ ಗಿಡದ ಪೊದೆಯಲ್ಲಿದ್ದ ಕತ್ತಿಯನ್ನು ತೆಗೆದುಕೊಟ್ಟರೆಂದು, ಪೊಲೀಸರು ಸದರಿ ಕತ್ತಿಯನ್ನು ಜಪ್ತಿಪಡಿಸಿಕೊಂಡರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:31 ಪ್ರಾಸಾ-20 ಕೆ.ಎಸ್.ಸತೀಶ್ ತಮ್ಮ ಸಾಕ್ಷ್ಯದಲ್ಲಿ ದಿ:09.03.2013ರಂದು ಮಂಗಳೂರಿನ ಐಲ್ಯಾಂಡ್ ಆಸ್ಪತ್ರೆಗೆ ಭೇಟಿ ಕೊಟ್ಟು ಗಾಯಾಳು ಅಸ್ಲಾಂ, ಇಮ್ರಾನ್, ಅಕ್ರಂ ಮತ್ತು ರಫೀಕ್‌ರ ಹೇಳಿಕೆಯನ್ನು ಮಾಡಿಕೊಂಡು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು, ಗಾಯಾಳುಗಳು ರಕ್ತ ಧರಿಸಿದ್ದ ಬಟ್ಟೆಗಳನ್ನು ವಶಪಡಿಸಿಕೊಂಡಿದ್ದಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:32 ಪ್ರಾಸಾ-23 ಸಿ.ಮಧುಸೂದನ್ ತಮ್ಮ ಸಾಕ್ಷ್ಯದಲ್ಲಿ ದಿ:15.03.2013ರಂದು ಈ ಪ್ರಕರಣದ ಕಡತವನ್ನು ಬಸವನಹಳ್ಳಿ ಆಉನಿರಿಂದ ಪಡೆದು, ಪರಿಶೀಲಿಸಿದ್ದು, ದಿ:22-3-13ರಂದು ~~ನ್ಯಾಯಾಲಯಕ್ಕೆ~~ ಸ್ವತಃ ಹಾಜರಾದ 2 ರಿಂದ 6ನೇ ಆರೋಪಿಗಳಾದ ನಿಮ್ಮನ್ನು ವಶಕ್ಕೆ ಪಡೆದು, ನ್ಯಾಯಾಲಯಕ್ಕೆ ಹಾಜರುಪಡಿಸಿ, ಸಾಕ್ಷಿದಾರರ ಹೇಳಿಕೆಯನ್ನು ಪಡೆದು, ದಿ:26-3-13ರಂದು 4 ರಿಂದ 7ನೇ ಆರೋಪಿತರನ್ನು ಪೊಲೀಸ್ ವಶಕ್ಕೆ ಪಡೆದು, ವೈದ್ಯಕೀಯ ತಪಾಸಣೆ ನಡೆಸಿ, ವಿಚಾರಣೆ ನಡೆಸಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:33 ಪ್ರಾಸಾ-23 ಮುಂದುವರಿದು ವಿಚಾರಣೆ ವೇಳೆ ಕೃತ್ಯಕ್ಕೆ ಉಪಯೋಗಿಸಿದ ಮುಚ್ಚಿಟ್ಟ ಆಯುದಗಳನ್ನು ತೋರಿಸುವುದಾಗಿ ಹೇಳಿರುತ್ತೀರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:34 ಪ್ರಾಸಾ-23 ಮುಂದುವರಿದು ದಿ:27-3-13ರಂದು ಆರೋಪಿಗಳಾದ ನೀವು ಒಪ್ಪಿಕೊಂಡಂತೆ ಪಂಚರಾದ ಸುನಿಲ್ ಮತ್ತು ಸಲೀಂರವರೊಂದಿಗೆ ಅವರು ಆರೋಪಿಗಳಾದ ನಿಮ್ಮನ್ನು ಶಹರಾ ಶಾದಿ ಮಹಲ್ ರಸ್ತೆಯಲ್ಲಿ ಕರೆದುಕೊಂಡು ಹೋದಾಗ ಆರೋಪಿ ಶಾಬಾಜ್ ನೀನು ಪೊದೆಯಲ್ಲಿ ಬಚ್ಚಿಟ್ಟಿದ್ದ ಮರದ ಹಿಡಿ ಇರುವ ಒಂದು ಕಬ್ಬಿಣ ಕತ್ತಿಯನ್ನು ಅಬಿದ್ ಒಂದು ದೊಣ್ಣೆಯನ್ನು, ಚಾಂದ್ 1 ಕಬ್ಬಿಣದ ರಾಡ್‌ನ್ನು, ನೌಶರ್ 1 ಕಬ್ಬಿಣದ ಕತ್ತಿ ಮತ್ತು 1 ಕಾಡು ಜಾತಿಯ ದೊಣ್ಣೆ ಮತ್ತು ನದೀಂ ರವರು ಒಂದು ಕತ್ತಿಯನ್ನು ಹಾಜರುಪಡಿಸಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:35 ಪ್ರಾಸಾ-23 ರವರು ಮುಂದುವರಿದು ಆರೋಪಿಗಳಾದ ನೀವುಗಳು ಹಾಜರುಪಡಿಸಿದ ಕತ್ತಿಗಳ ಮೇಲೆ ರಕ್ತದ ಕಲೆ ಇತ್ತೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:136 ಪ್ರಾಸಾ-23 ರವರು ಮುಂದುವರಿದು ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಮಾಲುಪಟ್ಟಿಗೆ ದಾಖಲಿಸಿ, ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ದಿ:28-3-13ರಂದು ಗಾಯಾಳು ಇಕ್ರಂ ಮತ್ತು ನೆಯಾಜ್‌ಇವರ ಗಾಯ ಪ್ರಮಾಣ ಪತ್ರವನ್ನು ಪಡೆದು, ದಿ: 29-3-13 ರಂದು ಅವರ ಮುಂದೆ ಹಾಜರುಪಡಿಸಿದ ಜೋಹರ್ ಅಂಜುಮ್ ದಸ್ತಗಿರಿ ಮಾಡಿ, ಆತನ ಸ್ವಯಿಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:137 ಪ್ರಾಸಾ-23 ರವರು ಮುಂದುವರಿದು ಪಂಚರಾದ ಮಸೂದ್ ಮತ್ತು ಚೇತನ್‌ರವರನ್ನು ಠಾಣೆಗೆ ಕರೆಸಿ, ಆರೋಪಿಗಳಾದ ನಿಮ್ಮನ್ನು ಶಹರಾ ಶಾದಿ ಮಹಲ್ ಬಳಿ ಕುಮಾರ್‌ರವರ ಮನೆ ಹತ್ತಿರ ಕರೆದುಕೊಂಡು ಹೋಗಿ ಪೊದೆಯಲ್ಲಿ ಬಚ್ಚಿಟ್ಟಿದ್ದ ಮರದ ಹಿಡಿ ಇರುವ ಒಂದು ಕಬ್ಬಿಣ ಕತ್ತಿಯನ್ನು ಹಾಜರುಪಡಿಸಿದಿರೆಂದು ಹಾಗೂ ಆ ಕತ್ತಿಯ ಮೇಲೆ ರಕ್ತದ ಕಲೆ ಇತ್ತೆಂದು, ಸದರಿ ಕತ್ತಿಯನ್ನು ಮಾಲು ಪಟ್ಟಿಯಲ್ಲಿ ದಾಖಲಿಸಿ, ನ್ಯಾಯಾಲಯದಿಂದ ಅನುಮತಿ ಪಡೆದು, ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ-:138 ಪ್ರಾಸಾ-23ರವರು ಮುಂದುವರಿದು ದಿ:4-4-13ರಂದು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಗಾಯಾಳುಗಳ ರಕ್ತ ತಾಗಿದ ಬಟ್ಟೆ, ಆರೋಪಿಗಳಾದ ನೀವು ಕೃತ್ಯಕ್ಕೆ ಉಪಯೋಗಿಸಿದ ಆಯುದಗಳನ್ನು ರಸಾಯನಿಕ ವಿಧಿ ವಿಜ್ಞಾನ ಸಂಸ್ಥೆ ಮಂಗಳೂರಿಗೆ ಕಳುಹಿಸಿ, ಎಫ್.ಎಸ್.ಎಲ್‌ನಿಂದ ವರದಿಯನ್ನು, ನಕ್ಷೆಯನ್ನು, ಗಾಯಳು ಪ್ರಮಾಣ ಪತ್ರವನ್ನು ಪಡೆದು, ಗಾಯಾಳು ಮರು ಹೇಳಿಕೆಯನ್ನು ಪಡೆದು, ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಗಳಾದ ನಿಮ್ಮ ವಿರುದ್ಧ ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆಃ- 39 ಪ್ರಾಸಾ-24 ಎಸ್.ಆನಂದ್ ತಮ್ಮ ಸಾಕ್ಷ್ಯದಲ್ಲಿ ದಿಃ8-3-13ರಂದು ರಾತ್ರಿ 9ರ ಸಮಯದಲ್ಲಿ ಗಾಯಾಳು ಅಬ್ದುಲ್ ವಾಜಿದ್ ನೀಡಿದ ಲಿಖಿತ ದೂರನ್ನು ಪಡೆದು, ಮೊಕದ್ದಮೆಯನ್ನು ದಾಖಲಿಸಿ, ಪ್ರವವಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ದಿ.9-3-13ರಂದು ಎ.ಎಸ್.ಐರವರನ್ನು ನೇಮಿಸಿ ಮಂಗಳೂರಿನ ಐಲ್ಯಾಂಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳ ಹೇಳಿಕೆಯನ್ನು ಪಡೆದು, ಅಕ್ಮಲ್ ಮತ್ತು ಸುಹೇಲ್‌ರನ್ನು ರಿಮಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-ಃ40 ಪ್ರಾಸಾ-24ರವರು ಮುಂದುವರಿದು ಆಸ್ಪತ್ರೆಯಿಂದ ಬಿಡುಗಡೆಗೊಂಡ ಇಕ್ರಂ ನೀಡಿದ ರಕ್ತದ ಕಲೆಯಿರುವ ಬಟ್ಟೆಗಳನ್ನು ಮಹಜರ್ ಮೂಲಕ ವಶಪಡಿಸಿಕೊಂಡು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು, ಸ್ಥಳ ಮಹಜರು ಮಾಡಿ ಕೃತ್ಯಕ್ಕೆ ಉಪಯೋಗಿಸಿದ ರಕ್ತದ ಕಲೆ ಇರುವ 2 ಕಲ್ಲುಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-ಃ41 ಪ್ರಾಸಾ-24ರವರು ಮುಂದುವರಿದು ಪ್ರತ್ಯಕ್ಷ ಸಾಕ್ಷಿ ಮತ್ತು ಗಾಯಾಳುವಿನ ಹೇಳಿಕೆಯನ್ನು ಮಾಡಿಕೊಂಡು, ಖಚಿತ ವರ್ತಮಾನದ ಮೇರೆಗೆ ಅಲ್ಲಿಂಪುರ ಬಸ್ಸು ನಿಲ್ದಾಣ ಬಳಿ ಬೆಳಗ್ಗೆ 9.45ಕ್ಕೆ ಜೋಹರ್ ಅಂಜುಮನನ್ನು ದಸ್ತಗಿರಿ ಮಾಡಿ, ಸಿ.ಪಿ.ಐ.ರವರ ಮುಂದೆ ಹಾಜರುಪಡಿಸಿರುತ್ತಾರೆಂದು ಹಾಗೂ ಮುಂದಿನ ತನಿಖೆಯನ್ನು ಸಿ.ಪಿ.ಐ.ರವರಿಗೆ ವಹಿಸಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-: 42 ಪ್ರಾಸಾ-25 ಹರೀಶ್ ಬಿ.ಎಸ್.ರವರು ತಮ್ಮ ಸಾಕ್ಷದಲ್ಲಿ ದಿ: 8-3-13ರಂದು ರಾತ್ರಿ 9.30ರ ಸಮಯದಲ್ಲಿ ಪ್ರವಪ ನಿಪಿ-37ನ್ನು ನ್ಯಾಯಾಧೀಶರ ಗೃಹ ಕಛೇರಿಗೆ ಸಲ್ಲಿಸಿರುತ್ತಾರೆಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ:43: ಈ ಸಾಕ್ಷ್ಯಾಧಾರಗಳ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ:

ಪ್ರಶ್ನೆ:44: ನಿಮ್ಮ ಪರ ಸಾಕ್ಷಿಗಳ ವಿಚಾರಣೆ ಮಾಡುವಿರಾ?

ಉತ್ತರ:

(ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನಿಂದ ಅಭಿಲೇಖಿಸಲ್ಪಟ್ಟಿದ್ದು, ಅವರಲ್ಲಿ ಸರಿಯಾದ ಮತ್ತು ನಿಜವಾದ ಹೇಳಿಕೆ ಅಡಗಿದೆ ಎಂದು ದೃಢೀಕರಿಸಿದೆ)

ದಿನಾಂಕ: 1 /12/2017

1/12/17.

( ಡಿ. ಕಂಬೇಗೌಡ)

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.